

ನಿರ್ಮಾಣದ ಹಂತದಲ್ಲಿರುವ ದೇವಸ್ಥಾನದ ಕಟ್ಟಡ

# ರಾಮಕೃಷ್ಣ ಮಿಷನ್, ಕಡಪ


(ರಾಮಕೃಷ್ಣ ಮಿಷನ್, ಬೇಲೂರು ಮಠ, ಹೌರಾ ಜಿಲ್ಲೆ, ಪಶ್ಚಿಮ ಬಂಗಾಳ 711 202 ಇದರ ಶಾಖಾ ಕೇಂದ್ರ)

ಸಿಟಿ ಕೇಂದ್ರ : ರಾಮಕೃಷ್ಣ ಮಠ, ಟ್ರಂಕ್ ರೋಡ್, ಕಡಪ 516 001

Ph : 241633 Email: kadapamath@yahoo.com Web Site: www.rkm-kadapa.org


## ಭಗವಾನ್ ಶ್ರೀರಾಮಕೃಷ್ಣರಿಗೆ ನಿವೇದಿತವಾದ ವಿಶ್ವಭಾವೈಕ್ಯ ದೇವಮಂದಿರ

ದಿವ್ಯತ್ರಯರ ಅನುಗ್ರಹದಿಂದ ಶ್ರೀರಾಮಕೃಷ್ಣರಿಗೆ ಮುಡಿಪಾದ ವಿಶ್ವಭಾವೈಕ್ಯ ಮಂದಿರದ ಕಟ್ಟಡ ನಿರ್ಮಾಣವು ಕಡಪ ಆಶ್ರಮದಲ್ಲಿ ಪೂರ್ಣವಾಗುತ್ತಲಿದೆ. ನಿಮಗೆ ಈಗಾಗಲೆ ಗೊತ್ತಿರುವ ಹಾಗೆ, ಈ ಮಂದಿರದ ಅಂದಾಜು ವೆಚ್ಚ ರೂ. 140 ಲಕ್ಷಗಳು. ಆದರೆ ಸಂಪೂರ್ಣವಾಗುವ ವೇಳೆಗೆ ನಾವು ಇನ್ನೂ 20 ಲಕ್ಷ ರೂಪಾಯಿಗಳನ್ನು ಹೆಚ್ಚಾಗಿ ಖರ್ಚು ಮಾಡಬೇಕಾಗಿದೆ. ಈ ಮಂದಿರದ ಉದ್ಘಾಟನೆ ಮತ್ತು ಭಗವಾನ್ ಶ್ರೀರಾಮಕೃಷ್ಣರ ಅಮೃತಶಿಲೆಯ ವಿಗ್ರಹದ ಪ್ರತಿಷ್ಠಾಪನೆಯನ್ನು 2012, ನವೆಂಬರ್ 22ರ ಪವಿತ್ರ ಜಗದ್ಧಾತ್ರಿ ಪೂಜೆಯ ದಿನದಂದು ನೆರವೇರಿಸಲು ಸಂಕಲ್ಪಿಸಲಾಗಿದೆ. ಈ ಸಂದರ್ಭ, ನವೆಂಬರ್ 20ರಿಂದ 23ರವರೆಗೆ 4 ದಿನಗಳ ಕಾಲ ಮಹೋತ್ಸವವನ್ನು ಆಯೋಜಿಸಲಾಗಿದೆ. ದಿವ್ಯತ್ರಯರ ಭಕ್ತರು ಮತ್ತು ಹಿತೈಷಿಗಳಿಗೆ, ಈ ಸಮಾರಂಭದಲ್ಲಿ ಭಾಗವಹಿಸಲು ಹಾರ್ದಿಕವಾದ ಸುಸ್ವಾಗತವನ್ನು ಬಯಸುತ್ತೇವೆ.

ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಪರಮಪೂಜ್ಯ ಶ್ರೀಮತ್ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಅವರು ಈ ಮಹೋತ್ಸವದಲ್ಲಿ ದಿವ್ಯ ಸಾನ್ನಿಧ್ಯವನ್ನು ವಹಿಸಿ, ಪೂಜಾಮಂದಿರದ ಉದ್ಘಾಟನೆಯನ್ನು ನೆರವೇರಿಸಲು ದಯವಿಟ್ಟು ಒಪ್ಪಿಕೊಂಡಿರುತ್ತಾರೆ. ಸುಮಾರು 250 ಸಾಧು ಬ್ರಹ್ಮಚಾರಿಗಳು ಮತ್ತು 5000 ಭಕ್ತರು (ಕಡಪ ನಗರದ ಹೊರಗಿನಿಂದ ಸುಮಾರು 2000 ಭಕ್ತರು ಆಗಮಿಸುವ ನಿರೀಕ್ಷೆಯಿದೆ) ಈ ಮಹೋತ್ಸವದಲ್ಲಿ ಪಾಲ್ಗೊಳ್ಳುವರು. ವಾಸ್ತುಹೋಮ, ವಿಶೇಷ ಪೂಜೆ, ಸಾಧು ಬ್ರಹ್ಮಚಾರಿಗಳು ಮತ್ತು ಭಕ್ತರನ್ನು ಒಳಗೊಂಡ ಶೋಭಾಯಾತ್ರೆ, ಹಿರಿಯ ಸಂನ್ಯಾಸಿಗಳು ಮತ್ತು ಇತರ ಗಣ್ಯವ್ಯಕ್ತಿಗಳಿಂದ ಪ್ರವಚನಗಳು, ಭಜನೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ವಿಶೇಷ ಸಂಚಿಕೆಯ ಬಿಡುಗಡೆ – ಇವು ಮಹೋತ್ಸವದ ಅಂಗಗಳಾಗಿರುತ್ತವೆ. ಈ ಕಾರ್ಯಕ್ರಮಗಳಿಗೆ ಒಟ್ಟಾರೆ ರೂ. 45 ಲಕ್ಷಗಳಷ್ಟು ಖರ್ಚಾಗುವುದು ಎಂದು ಅಂದಾಜು ಮಾಡಲಾಗಿದೆ. ಈ ಪವಿತ್ರಕಾರ್ಯದಲ್ಲಿ ನಮ್ಮೊಡನೆ ತನು ಮನ ಧನಗಳ ಮೂಲಕ ಸಹಕರಿಸಿ, ಈ ಸಮಾರಂಭವನ್ನು ಅದ್ದೂರಿಯಾಗಿ ಮತ್ತು ಸ್ಮರಣೀಯವಾಗಿ ನಡೆಸಿಕೊಡಬೇಕೆಂದು ಮತ್ತು ಆ ಮೂಲಕ ದಿವ್ಯತ್ರಯರ ಕೃಪಾಶೀರ್ವಾದಕ್ಕೆ ಪಾತ್ರರಾಗಬೇಕೆಂದು ನಮ್ಮೆಲ್ಲ ಭಕ್ತರಿಗೆ ಮತ್ತು ಹಿತೈಷಿಗಳಿಗೆ ನಮ್ಮ ವಿನಮ್ರ ವಿನಂತಿ.

ದೇಣಿಗೆಗಳನ್ನು 'Ramakrishna Mission, Kadapa' ಹೆಸರಿಗೆ ಬರೆದ ಚೆಕ್ ಮತ್ತು ಡ್ರಾಫ್ಟ್‌ಗಳ ಮೂಲಕ ಮೇಲಿನ ವಿಳಾಸಕ್ಕೆ ಕಳುಹಿಸಬೇಕೆಂದು ಕೇಳಿಕೊಳ್ಳುತ್ತೇವೆ. ತಾವು State Bank of India ದಲ್ಲಿರುವ ನಮ್ಮ ಖಾತೆಗೆ ನೇರವಾಗಿ E – transfer ಮಾಡುವ ಮೂಲಕವೂ ನಿಮ್ಮ ಕೊಡುಗೆಗಳನ್ನು ಸಲ್ಲಿಸಬಹುದು. ಅದರ ವಿವರಗಳು ಹೀಗಿವೆ: Ramakrishna Mission A/c No 30186936408 at SBI, RIMS Branch, Cuddapah. Bank code : SBIN 0010107. ತಾವು ಹಣವನ್ನು E- transfer ಮಾಡುವಾಗ ದಯವಿಟ್ಟು ನಿಮ್ಮ ಸಂಪೂರ್ಣ ಹೆಸರು ಮತ್ತು ವಿಳಾಸಗಳನ್ನೂ, ಹಾಗೆಯೇ ತಾವು ಸಲ್ಲಿಸುತ್ತಿರುವ ಮೊಬಲಗಿನ ವಿವರವನ್ನೂ ನಮಗೆ ತಿಳಿಸಬೇಕಾಗಿ ಪ್ರಾರ್ಥಿಸುತ್ತೇವೆ. ಇದರಿಂದಾಗಿ ನಮ್ಮ ಖಾತೆಯಲ್ಲಿ ಆ ಹಣವನ್ನು ಸ್ವೀಕರಿಸಲು ಮತ್ತು ಅಧಿಕೃತ ರಸೀದಿಯನ್ನು ನಿಮಗೆ ಕಳುಹಿಸಿಕೊಡಲು ಅನುಕೂಲವಾಗುತ್ತದೆ.

ಸ್ವಾಮಿ ಆತ್ಮವಿದಾನಂದ

ಕಾರ್ಯದರ್ಶಿಗಳು

**ಮಹೋತ್ಸವದ ಬಗ್ಗೆ ವಿವರಗಳನ್ನು ತಿಳಿದುಕೊಳ್ಳಲು ಮತ್ತು ಪ್ರತಿನಿಧಿಗಳಾಗಿ ನೋಂದಾಯಿಸಿಕೊಳ್ಳಲು ದಯವಿಟ್ಟು ನಿಮ್ಮ ಹೆಸರು ಮತ್ತು ಪೂರ್ಣ ವಿಳಾಸಗಳನ್ನು 09248545012 – ಈ ಮೊಬೈಲ್ ಸಂಖ್ಯೆಗೆ SMS ಮಾಡಬೇಕೆಂದು ಕೇಳಿಕೊಳ್ಳುತ್ತೇವೆ. ಇದಲ್ಲದೆ ಸಮಾರಂಭದ ವಿವರಗಳನ್ನು www.rkm-kadapa.org ವೆಬ್‌ಸೈಟ್‌ನಲ್ಲೂ ನೋಡಬಹುದು. ಅಲ್ಲಿಂದ ಸಮಾರಂಭದ ಪ್ರತಿನಿಧಿ ಫಾರಂ ಅನ್ನು ಡೌನ್‌ಲೋಡ್ ಮಾಡಿಕೊಂಡು, ಅದನ್ನು ಭರ್ತಿಮಾಡಿ, ನಿಗದಿತ ಮೊತ್ತದ ಡಿ.ಡಿ.ಯೊಂದಿಗೆ, ಮೇಲಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ. ನೋಂದಾವಣೆಗೆ ಕಡೆಯ ದಿನಾಂಕ: 31.7.2012**

ಸಂಪಾದಕೀಯ

# ಜ್ಞಾನಯೋಗದ ಪ್ರಜ್ವಲ ಬೆಳಕು



(ಹಿಂದಿನ ಸಂಚಿಕೆಯಿಂದ)

**ಬ್ರಹ್ಮಾಂಡ:** ಈ ವಿಶ್ವವು ಯಾವುದರಿಂದ ಆಯಿತು? ಶೂನ್ಯದಿಂದ ಏನನ್ನೂ ಸೃಷ್ಟಿಸಲು ಸಾಧ್ಯವಿಲ್ಲ, ತಾನೆ. ಹೀಗಾಗಿ ಈ ಪ್ರಪಂಚವು ಎಂದೆಂದಿಗೂ ಇತ್ತು. ಅದು ಸೂಕ್ಷ್ಮಸ್ಥಿತಿಯಲ್ಲಿತ್ತು. ಅನಂತರ ಸ್ಥೂಲಸ್ಥಿತಿಗೆ ವಿಕಸನಗೊಂಡಿತು ಅಥವಾ ವ್ಯಕ್ತಗೊಂಡಿತು. ಈಗ ಅದು ವ್ಯಕ್ತಸ್ಥಿತಿಯಲ್ಲಿದೆ. ಪುನಃ ಸೂಕ್ಷ್ಮಕ್ಕೆ ಹಿಂತಿರುಗುತ್ತದೆ. ಹೀಗೆ ವಿಕಾಸ ಮತ್ತು ಸಂಕೋಚನಗಳು ಒಂದಾದ ಮೇಲೆ ಇನ್ನೊಂದರಂತೆ ನಡೆಯುತ್ತಲೇ ಇರುತ್ತವೆ. ನಾವು ಏನನ್ನೂ ಹೊಸದಾಗಿ ಈ ವಿಶ್ವಕ್ಕೆ ಸೇರಿಸಲಾರೆವು; ಯಾವುದನ್ನೂ ಇದರಿಂದ ಕಡಿಮೆ ಮಾಡಲೂ ಸಾಧ್ಯವಿಲ್ಲ. ಒಂದು ಸ್ಥಿತಿಯಿಂದ ಮತ್ತೊಂದು ಸ್ಥಿತಿಗೆ ಪರಿವರ್ತನೆ ನಡೆಯುತ್ತಿರುವುದು, ಅಷ್ಟೆ. ಇದು ಹಿಂದೂಗಳ ಸಿದ್ಧಾಂತ. ಯಾವುದೇ ಕಾರ್ಯದ ಹಿಂದೆ ಕಾರಣ ಇರಬೇಕು. ಈ ಬ್ರಹ್ಮಾಂಡಕ್ಕೆ ಕಾರಣ ಯಾವುದು? ಇದರ ವಿಕಸನಕ್ಕೆ ಅಥವಾ ಸಂಕೋಚನಕ್ಕೆ ಪ್ರೇರಣೆ ನೀಡುವ ಶಕ್ತಿಯದಾವುದು? ಇದನ್ನೇ ನಾವು 'ದೇವರು' ಎನ್ನುವುದು. ಇದು ಚಿತ್ ಸ್ವರೂಪವುಳ್ಳದ್ದು. ಅಂದರೆ ಚೈತನ್ಯಮಯವಾದದ್ದು. ಜಡ ಜಗತ್ತಿನ ಹಿಂದಿರುವ ಚೈತನ್ಯವೇ ಇದು. ಈ ವಿಶ್ವಚಿತ್ತಿನ ಭಾವನೆ ಪವಿತ್ರವಾದುದು, ಮಹಿಮಾನ್ವಿತವಾದುದು – ಇವೆಲ್ಲವೂ 'ದೇವರು' ಎಂಬ ಪದದೊಂದಿಗೆ ಸಂಬಂಧ ಪಡೆದಿವೆ. ಇದನ್ನು ಪರಮೇಶ್ವರ ಎಂದೂ ಹೇಳಬಹುದು. ವೇದಾಂತದ ಪ್ರಕಾರ, ಈ ದೇವನೇ ಜಗತ್ತಾಗಿ ರೂಪುಗೊಂಡಿದ್ದಾನೆ. ಹಾಗೆಯೇ ಆವನು ಜಗತ್ತಿನ ಕರ್ತನೂ ಆಗಿದ್ದಾನೆ. ಅಂದರೆ ಅವನು ಉಪಾದಾನ ಕಾರಣನೂ ಆಗಿದ್ದಾನೆ ಮತ್ತು ನಿಮಿತ್ತ ಕಾರಣನೂ ಆಗಿದ್ದಾನೆ. ಇದೇ ವಿಶ್ವರಹಸ್ಯ. (ಮಣ್ಣಿನಿಂದ ಮಡಕೆ ಆಗಿದೆ. ಮಣ್ಣೇ ಮಡಕೆಯಾಗಿ ಪರಿವರ್ತನೆಗೊಳ್ಳುತ್ತದೆ. ಹೀಗಾಗಿ ಮಣ್ಣು ಎನ್ನುವುದು ಉಪಾದಾನಕಾರಣ. ಕುಂಭಕಾರನು ನಿಮಿತ್ತಕಾರಣ.) ಇದನ್ನು ಸ್ವಾಮೀಜಿ ಸೊಗಸಾಗಿ ಹೀಗೆ ವಿವರಿಸುತ್ತಾರೆ: "ಎಲ್ಲವೂ ಅವನೇ ಆಗಿದ್ದಾನೆ. ಅತಿ ಕ್ಷುದ್ರ ಜೀವಾಣುವಿನಲ್ಲಿ ಅವಿಕಸಿತ ರೂಪದಲ್ಲಿ ಇರುವವನೂ ಅವನೇ, ಮತ್ತೊಂದು ಕಡೆಯಲ್ಲಿ ವಿಕಾಸವಾಗಿ ದೇವರಾಗುವವನೂ ಅವನೇ. ಅವರೋಹಣದಿಂದ ಅವನೇ ಕ್ಷುದ್ರತಮ ಅಣುವಾಗುವನು. ಕ್ರಮೇಣ ಆರೋಹಣದಿಂದ ತನ್ನ ನೈಜಸ್ವಭಾವವನ್ನು ವ್ಯಕ್ತಗೊಳಿಸುತ್ತ, ಕೊನೆಗೆ ತನ್ನನ್ನೇ ಸೇರುವವನು... ಒಂದೇ ಮಾತಿನಲ್ಲಿ ಹೇಳುವುದಾದರೆ, ನಾವು ಅವನಿಂದ ಬಂದೆವು, ಅವನಲ್ಲಿರುವೆವು ಮತ್ತು ಅವನ ಬಳಿಗೇ ತೆರಳುವೆವು."

**ಜೀವ :** ನಾವು ಇದುವರೆಗೂ ಬಾಹ್ಯ ಜಗತ್ತಿನ ವಿಚಾರ ಮಾಡಿದೆವು. ಈಗ ಅಂತರಂಗ ಜಗತ್ತಿನ ವಿಚಾರ ಮಾಡೋಣ. ಇದು ಕೂಡ ಪ್ರಶ್ನೆಗಳಿಂದಲೇ ಆರಂಭವಾಗುತ್ತದೆ. ಅವುಗಳಲ್ಲಿ ಕೆಲವನ್ನು ಸ್ವಾಮೀಜಿ ಹೀಗೆ ಎತ್ತಿತೋರಿಸುವರು: "ಈ ಕ್ಷಣಿಕವಾದ ಮನುಷ್ಯನ ಬಾಳಿನಲ್ಲಿ ಯಾವುದಾದರೂ ಶಾಶ್ವತವಾದುದು ಇದೆಯೆ? ನಮ್ಮ ದೇಹ ಮಣ್ಣುಪಾಲಾದರೆ, ಮಣ್ಣುಪಾಲಾಗದ ಮತ್ತೊಂದು ಅಂಶ ಇಲ್ಲಿ ಇಲ್ಲವೆ?" ಅನಂತರ ಸ್ವಾಮೀಜಿ ಮನುಷ್ಯನ ವ್ಯಕ್ತಿತ್ವದ ಕೇಂದ್ರ ಅದಾವುದು ಎನ್ನುವ ವಿಶ್ಲೇಷಣೆಯನ್ನು ಸೊಗಸಾಗಿ ಮಾಡುತ್ತಾರೆ. ಇಂದ್ರಿಯಗಳಿಂದ ನಾವು ಪ್ರಪಂಚವನ್ನು ಅನುಭವಿಸುತ್ತೇವೆ ಎಂದುಕೊಂಡಿದ್ದೇವೆ. ಆದರೆ ನಿಜವಾಗಿಯೂ ಅನುಭವದ ಕೇಂದ್ರ ಇರುವುದು ಮನಸ್ಸಿನಲ್ಲಿ. ಇಂದ್ರಿಯಗಳು ಸಂವೇದನೆಯನ್ನು ಮನಸ್ಸಿಗೆ ಒಯ್ಯುವ ಸಾಧನಗಳು ಅಷ್ಟೇ. ಮನಸ್ಸು ಕೂಡ ಬರಿಯ ಒಂದು ವಾಹಕ. ಅದು ಸಂವೇದನೆಗಳನ್ನು, ಇನ್ನೂ ಮುಂದಕ್ಕೆ, ಅಂದರೆ ಬುದ್ಧಿಗೆ ಒಯ್ಯುತ್ತದೆ. ಬುದ್ಧಿ ನಿಶ್ಚಯವನ್ನು ಕೈಗೊಳ್ಳುತ್ತದೆ. ಆದರೆ, ಸ್ವಾಮೀಜಿ ಹೇಳುವಂತೆ, ಅದೂ ಪೂರ್ಣವಾದುದಲ್ಲ. ಬುದ್ಧಿ ಇನ್ನೂ ಮುಂದೆ

ಸಂವೇದನೆಗಳನ್ನು ಯಾರ ಬಳಿಗೆ ಒಯ್ಯಬೇಕು? ಜೀವಾತ್ಮನ ಬಳಿಗೆ ಒಯ್ಯಬೇಕು, ಆತನ ಮುಂದೆ ಒಪ್ಪಿಸಬೇಕು. ಅಲ್ಲಿಂದ ಏನು ಮಾಡಬೇಕು ಎನ್ನುವ ಅಪ್ಪಣೆ ಬರುವುದು. ಇಲ್ಲಿಗೆ ಅನುಭವ ಅಥವಾ ಜ್ಞಾನಗ್ರಹಣ ಸಂಪೂರ್ಣಗೊಳ್ಳುವುದು. ಮನುಷ್ಯನ ಸ್ಥೂಲ ಶರೀರವೆಂದರೆ ಇಂದ್ರಿಯಗಳು. ಮನಸ್ಸು ಮತ್ತು ಬುದ್ಧಿಗಳು ಸೂಕ್ಷ್ಮದೇಹಕ್ಕೆ ಸೇರಿವೆ. ಆತ್ಮವು ಅದನ್ನೂ ಮೀರಿದೆ. ಈ ಆತ್ಮಕ್ಕೆ ವೃದ್ಧಿ ಕ್ಷಯಗಳಿಲ್ಲ, ದೇಹ, ಮನಸ್ಸುಗಳಿಗೆ ಇದೆ. ದೇಹ, ಮನಸ್ಸುಗಳು ಜಡ. ಆತ್ಮವು ಚೈತನ್ಯರೂಪ. ಜಡಕ್ಕೆ ಜ್ಞಾನವಿಲ್ಲ. ಆದರೆ, ಆತ್ಮಕ್ಕೆ ಸ್ವಯಂಪ್ರಜ್ಞೆ ಇದೆ. ಜ್ಞಾನವೆನ್ನುವುದು ಸ್ವಯಂವೇದ್ಯ. ಜಡ ತನ್ನನ್ನು ತಾನು ಅರಿಯಲಾರದು; ಚೈತನ್ಯ ಮಾತ್ರ ತನ್ನನ್ನು ತಾನು ಅರಿಯಬಲ್ಲುದು. ಹೀಗಾಗಿ ದೇಹ, ಮನಸ್ಸು, ಬುದ್ಧಿಗಳಿಗೆ ಅಸ್ತಿತ್ವದ ಅರಿವಿಲ್ಲ. ಆ ಅರಿವು, ಪ್ರಜ್ಞೆ, ಜ್ಞಾನ ಉಂಟಾಗುವುದು, ಆತ್ಮವೆಂಬ ಚೈತನ್ಯವಸ್ತುವಿನಿಂದ ಮಾತ್ರ. ಈ ಆತ್ಮ 'ಸ್ವಯಂ ಪ್ರಕಾಶ.' ಅದೇ ದೇಹ, ಮನಸ್ಸು, ಬುದ್ಧಿಗಳಿಗೆ ಪ್ರಜ್ಞೆಯ ಬೆಳಕನ್ನು ಕೊಡುತ್ತದೆ. **ಸತ್** (ಅಸ್ತಿತ್ವ), **ಚಿತ್** (ಜ್ಞಾನ) ಮತ್ತು **ಆನಂದ** (ಪ್ರಿಯವಾಗಿರುವಿಕೆ) ಎನ್ನುವುದು ಈ ಆತ್ಮದ ಸ್ವರೂಪವೇ ಆಗಿದೆ, ಬರಿಯ ಗುಣಗಳಲ್ಲ. ಈ ಆತ್ಮವು ಕಾಲಕ್ಕೂ ಅತೀತ. ಕಾಲವೇ ಆತ್ಮನೊಳಗಿದೆ. ಹೀಗೆ ಆತ್ಮ ಎಂಬುದು ಅವಿನಾಶಿಯಾದ ಏಕಮೇವ ವಸ್ತುವಾಗಿದೆ. ನಾವು ಆತ್ಮಸ್ವರೂಪರು ಎಂದು ವೇದಾಂತ ಹೇಳುತ್ತದೆ. ಹೀಗಿರುವಾಗ, ನಾವಾರೂ ಶೂನ್ಯದಿಂದ ಬಂದವರಲ್ಲ, ಶೂನ್ಯಕ್ಕೂ ಹೋಗುವವರಲ್ಲ. ಈ ಸಂದರ್ಭದಲ್ಲಿ ಸ್ವಾಮೀಜಿ ಹೀಗೆ ಹೇಳುತ್ತಾರೆ: "ನಿಮ್ಮನ್ನು, ನಮ್ಮನ್ನು ನಾಶಮಾಡುವ ಅಥವಾ ಶೂನ್ಯಕ್ಕೆ ಕಳಿಸುವ ಯಾವ ಶಕ್ತಿಯೂ ಪೃಥ್ವಿಯಲ್ಲಿ ಅಥವಾ ಅದರ ಹೊರಗೆ ಇಲ್ಲ."

ಪುನರ್ಜನ್ಮ ಎಂದರೆ, ಆತ್ಮವು ಒಂದು ದೇಹದಿಂದ ಇನ್ನೊಂದು ದೇಹಕ್ಕೆ ವರ್ಗಾವಣೆಗೊಳ್ಳುವುದು ಮಾತ್ರ. ಹೀಗಾಗಿ ನಾವು ಪುನರ್ಜನ್ಮದ ವಿಷಯದಲ್ಲಿ ಭಯಪಡಬೇಕಾದ್ದಿಲ್ಲ. ಮೃತ್ಯು ಎಂದರೆ ಸರ್ವಥಾ ನಾಶವಲ್ಲ; ದೇಹದ ನಾಶ ಅಷ್ಟೇ. ಈ ಪುನರ್ಜನ್ಮ ಇರುವುದನ್ನು ಸಾಧಿಸಿ ತೋರಿಸಲು ಸಾಧ್ಯ. ಪುನರ್ಜನ್ಮವು ಪ್ರತಿಯೊಬ್ಬ ಜೀವಿಯ ಸ್ವಾತಂತ್ರ್ಯವನ್ನು ಪ್ರತಿಪಾದಿಸುತ್ತದೆ. 'ಮಾಡಿದ್ದುಣ್ಣೋ ಮಹಾರಾಯ' – ನಮ್ಮ ದೌರ್ಬಲ್ಯಗಳಿಗೆ ನಾವು ಯಾರನ್ನೂ ದೂಷಿಸಲು ಸಾಧ್ಯವಿಲ್ಲ. ನಾವು ಹಿಂದೆ ಮಾಡಿದ ಕರ್ಮಗಳಿಗೆ ಅನುಸಾರವಾಗಿ, ಈ ಜನ್ಮ ನಮಗೆ ಒದಗಿಬಂದಿದೆ. ಅದೇ ರೀತಿ, ಇಂದಿನ ಕರ್ಮಗಳಿಗೆ ಅನುಸಾರವಾಗಿ ಮುಂದಿನ ಜನ್ಮವನ್ನು ಪಡೆದುಕೊಳ್ಳುತ್ತೇವೆ. ನಮ್ಮ ಅದೃಷ್ಟಕ್ಕೆ ನಾವೇ ಹೊಣೆಗಾರರು – ಹೀಗೆ ಈ ಸಿದ್ಧಾಂತವು ನಮ್ಮ ಸಮಸ್ಯೆಗಳಿಗೆಲ್ಲ ಪರಿಹಾರವಾಗಬಲ್ಲುದು ಎಂದು ಸ್ವಾಮೀಜಿ ಅಭಿಪ್ರಾಯಪಡುತ್ತಾರೆ. ಹಾಗೆಂದೇ ಅವರು ಹೀಗೆ ಕರೆನೀಡುತ್ತಾರೆ: "ನಿಮ್ಮ ದೋಷಗಳಿಗೆ ಯಾರನ್ನೂ ದೂರಬೇಡಿ. ನಿಮ್ಮ ಸ್ವಂತ ಕಾಲಿನ ಮೇಲೆ ನಿಂತುಕೊಳ್ಳಿ. ಜವಾಬ್ದಾರಿಯನ್ನೆಲ್ಲ ನೀವೇ ಹೊತ್ತುಕೊಳ್ಳಿ... ಎದ್ದುನಿಲ್ಲಿ! ಧೀರರಾಗಿ! ಬಲಾಢ್ಯರಾಗಿ... ನಿಮಗೆ ಬೇಕಾದ ಶಕ್ತಿ ಸಹಾಯವೆಲ್ಲ ನಿಮ್ಮಲ್ಲೇ ಇದೆ! ಆದಕಾರಣ ನಿಮ್ಮ ಭವಿಷ್ಯವನ್ನು ನೀವೇ ನಿರ್ಮಿಸಿಕೊಳ್ಳಿ."

**ಅಮರತ್ವ :** ತಾವು ಹಿಂದೆ ಹೇಳಿರುವ ವಿಚಾರಗಳ ಹಿನ್ನೆಲೆಯಲ್ಲಿ ಅಮರತ್ವ ಎಂದರೇನು ಎಂದು ಎರಡು ವಿಧಾನಗಳ ಮೂಲಕ ಸ್ವಾಮಿ ವಿವೇಕಾನಂದರು ವಿವರಿಸುವರು. **ಮೊದಲನೆಯ ಭಾವನೆಯೇನೆಂದರೆ, ಪ್ರಪಂಚದಲ್ಲಿ ಯಾವುದೂ ನಾಶವಾಗುವುದಿಲ್ಲ ಎಂಬುದು.** ಸ್ಥೂಲವು ಸೂಕ್ಷ್ಮವಾಗುತ್ತದೆ, ಮತ್ತೆ ಸೂಕ್ಷ್ಮವು ಸ್ಥೂಲವಾಗುತ್ತದೆ. ಒಂದು ಅಭಿವ್ಯಕ್ತಿಯು ಒಂದಾದ ಮೇಲೊಂದು ಚಕ್ರದಂತೆ ಮೇಲೆದ್ದು, ಕೆಳಗೆ ಉರುಳಿ ಹೋಗುತ್ತದೆ. ಸಂಯೋಗವಾಗಿದ್ದು, ವಿಯೋಗವಾಗುತ್ತದೆ. ಅವುಗಳೇ ಮತ್ತೆ ಸಂಯೋಗಗೊಳ್ಳುತ್ತವೆ. ಹಾಗೆಯೇ ಭೌತಿಕ ಆಕಾರಗಳು ಕೂಡ ಪುನರಾವರ್ತನೆಗೊಳ್ಳುತ್ತವೆ. ಇದರಿಂದ ಇಷ್ಟು ಸ್ಪಷ್ಟವಾಗುವುದು: ಯಾವ ಶಕ್ತಿಯೂ ನಾಶವಾಗದು, ಯಾವ ದ್ರವ್ಯವೂ ನಾಶವಾಗದು. ಹೀಗಿರುವಾಗ, ಸ್ವಾಮೀಜಿ ಹೇಳುತ್ತಾರೆ, "ಯಾವ ಜೀವಿಗೂ ಅನಂತ ನರಕವಿರಲಾರದು; ಅದು ಸಾಧ್ಯವೇ ಇಲ್ಲ" ಎಂದು. ಏಕೆಂದರೆ ಜೀವಿಯ ಗತಿಯೆನ್ನುವುದು ವೃತ್ತದಂತೆ ಇದೆ. ಹೊರಟ ಸ್ಥಳಕ್ಕೆ ಅದು ಹಿಂದಿರುಗಲೇಬೇಕು. ನಾವು ದೇವರಿಂದ ಹೊರಟುಬಂದಿದ್ದೇವೆ. ನಾವು ವೃತ್ತವನ್ನು ಪೂರೈಸಿ ವಿಶ್ವ ಚೈತನ್ಯವಾದ ದೇವರ ಕಡೆಗೇ ತಿರುಗಿ ಹೋಗಬೇಕು.

ಇನ್ನು ಎರಡನೆಯ ಭಾವನೆಯನ್ನು ನೋಡೋಣ. ಅದರ ಪ್ರಕಾರ, **ಪ್ರತಿಯೊಂದು ಮಿಶ್ರವಸ್ತುವೂ ತನ್ನ ಮೂಲಾವಸ್ಥೆಗೆ ಹೋಗಲೇಬೇಕು.** ಈ ಪ್ರಪಂಚದಲ್ಲಿ ಯಾವುದು ದ್ರವ್ಯದಿಂದ ಅಥವಾ ಶಕ್ತಿಯಿಂದ ಉಂಟಾಗಿರುವ ಸಂಯುಕ್ತವಸ್ತುವೋ ಅದು ತನ್ನ ಮೂಲಾವಸ್ಥೆಗೆ ಹಿಂತಿರುಗಲೇಬೇಕು. ಹೀಗೆ ಮೂಲಾವಸ್ಥೆಗೆ ಹಿಂತಿರುಗುವುದನ್ನೇ ನಾವು 'ಸಾವು', 'ವಿನಾಶ' ಎನ್ನುತ್ತೇವೆಯೇ ಹೊರತು, ಆತ್ಯಂತಿಕ ಸಾವು ಎನ್ನುವುದಾಗಲಿ, ನಾಶ ಎನ್ನುವುದಾಗಲಿ ಇಲ್ಲವೇ ಇಲ್ಲ. ಹೀಗೆ ವಿಶ್ಲೇಷಿಸುತ್ತ ಹೋದರೆ, ಎಲ್ಲದರ ಮೂಲಾವಸ್ಥೆಯನ್ನು ತಲುಪುತ್ತೇವೆ. ಅದಕ್ಕೆ ನಾಶವಾಗಲಿ, ಸಾವಾಗಲಿ ಇಲ್ಲ. ಅದೇ ಆತ್ಮ. ಚೈತನ್ಯಸ್ವರೂಪವಾದ ಆತ್ಮನು ಸಂಯುಕ್ತವಸ್ತುವಲ್ಲ. ಹೀಗಾಗಿ ಅದು ಎಲ್ಲದಕ್ಕೂ ಕಾರಣ. ಅದಕ್ಕೆ ಯಾವುದೇ ಕಾರಣ ಇಲ್ಲ. ಮಾನವನ ಆತ್ಮವು ಭಗವಂತನೆಂಬ ವಿಶ್ವ ಚೈತನಕ್ಕೆ ಸಮಾನವಾದುದು. ಇಂತಹ ಆತ್ಮವು ವಿಶ್ವವ್ಯಾಪಿ. ಅದೇ ನಮ್ಮ ನೈಜಸ್ವರೂಪ. ಇದನ್ನೇ ಸ್ವಾಮೀಜಿ ಹೀಗೆ ಸ್ವಾರಸ್ಯಕರವಾಗಿ ತಿಳಿಸುತ್ತಾರೆ: "ನೀವು ವಿಶ್ವದಲ್ಲಿ ಎಲ್ಲ ಕಡೆಯೂ ಇದ್ದೀರಿ. ಹಾಗಾದರೆ, ಹುಟ್ಟುವುದು, ಸಾಯುವುದು – ಇವೆಲ್ಲ ಏನು? ಅವು ಅಜ್ಞಾನ, ಮಿದುಳಿನ ಭ್ರಾಂತಿ ಮಾತ್ರ. ನೀವು ಎಂದೂ ಹುಟ್ಟಲಿಲ್ಲ, ಎಂದಿಗೂ ಸಾಯುವುದಿಲ್ಲ. ನಿಮಗೆ ಜನನವಾಗಲಿ, ಪುನರ್ಜನ್ಮವಾಗಲಿ ಇಲ್ಲ... ನೀವು ಬಂದು ಹೋಗುವುದೆಂದರೆ ಅದರ ಅರ್ಥವೇನು?

ಎಲ್ಲ ತಿರುಳಿಲ್ಲದ ಮಾತು. ಮನಸ್ಸೆನ್ನುವ ಸೂಕ್ಷ್ಮದೇಹದ ಬದಲಾವಣೆಯಿಂದ ಜನಿಸಿದ ಭ್ರಾಂತಿ, ಅಷ್ಟೇ." ನಾವು ಆತ್ಮಸ್ವರೂಪಿಗಳು. ಹೀಗಾಗಿ ಬಂಧನ, ಪಾಪ, ದುರ್ಬಲತೆ – ಇವುಗಳ ಕಲ್ಪನೆಯೆಲ್ಲ ಬರಿಯ ಭ್ರಮೆ ಎಂದು ಸ್ವಾಮೀಜಿ ಘೋಷಿಸುತ್ತಾರೆ. ಅವರ ವೀರವಾಣಿ ಹೀಗೆ ಮೊಳಗುತ್ತದೆ: "ನಿಮ್ಮನ್ನು ದುರ್ಬಲರನ್ನಾಗಿ ಮಾಡುವುದು ಯಾವುದು? ನೀವು ಅಂಜುವುದು ಯಾವುದಕ್ಕೆ? ನೀವೊಬ್ಬರೇ ಈ ಪ್ರಪಂಚದಲ್ಲಿರುವವರು. ಎದ್ದುನಿಂತು ಮುಕ್ತರಾಗಿ... ಬಂಡೆಯಂತೆ ನಿಲ್ಲಿ... ನಿಮ್ಮನ್ನು ಬಂಧಿಸುವುದು ಯಾವುದು? ನಿಮ್ಮ ಭ್ರಾಂತಿ ಅಥವಾ ಅಜ್ಞಾನ. ಮತ್ತಾವುದೂ ನಿಮ್ಮನ್ನು ಬಂಧಿಸಲಾರದು. ನೀವು ನಿತ್ಯಶುದ್ಧರು, ಮಂಗಳಸ್ವರೂಪರು." ಕಡೆಯದಾಗಿ, ಈ ತತ್ತ್ವವನ್ನು ಜೀವನದಲ್ಲೆಲ್ಲಾ ಅನುಷ್ಠಾನಕ್ಕೆ ತರಬೇಕೆಂದು ಸ್ವಾಮೀಜಿ ಬೋಧಿಸುತ್ತಾರೆ: "ಇಡೀ ವಿಶ್ವವೇ ನೀವು ಎಂದು ಅರಿತು ಇಡೀ ಜೀವನದಲ್ಲಿ ಅಭ್ಯಾಸಮಾಡಿ. ಯಾರು ಇದನ್ನು ತಿಳಿದು ತಮ್ಮ ಜೀವನವನ್ನು ಇದರಂತೆ ರೂಪಿಸಿಕೊಳ್ಳುವರೋ, ಅವರು ಎಂದಿಗೂ ಅಜ್ಞಾನದಲ್ಲಿ ತೊಳಲುವುದಿಲ್ಲ."

**ಆತ್ಮ:** ಈ ಪ್ರವಚನದಲ್ಲಿ ಮೊದಲಿಗೆ ಸ್ವಾಮೀಜಿ, ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತ ತತ್ತ್ವಗಳ ವಿಚಾರವನ್ನು ಪ್ರಸ್ತುತಪಡಿಸುತ್ತಾರೆ. ದ್ವೈತಿಗಳ ಪ್ರಕಾರ ವಿಶ್ವವನ್ನು ದೇವರು ಸೃಷ್ಟಿಸುತ್ತಾನೆ. ದೇವರು, ಜಗತ್ತು ಮತ್ತು ಜೀವಿಗಳಿಗಿಂತ ಭಿನ್ನನಾದವನು. ದೇವರು ಆದಿ, ಅಂತ್ಯರಹಿತ. ಜಗತ್ತೂ ಆದಿ, ಅಂತ್ಯರಹಿತ. ಹಾಗೆಯೇ ಜೀವರೂ ಕೂಡ. ದೇವರು ಸಗುಣ. ಅವನಿಗೆ ಗುಣಗಳಿವೆ. ಅವನು ದಯಾಮೂರ್ತಿ, ನ್ಯಾಯಪರ, ಪರಾಕ್ರಮಶಾಲಿ ಮತ್ತು ಸರ್ವಶಕ್ತ. ಅವನನ್ನು ಪ್ರೀತಿಸಬಹುದು, ಪ್ರಾರ್ಥಿಸಬಹುದು. ಮನುಷ್ಯರಲ್ಲಿ ಇರುವ ದೋಷಗಳಾವುವೂ ಅವನಲ್ಲಿ ಇಲ್ಲ. ಅವನು ಅನಂತ ಕಲ್ಯಾಣ ಗುಣಗಣಿ. ಹಾಗೆಯೇ ಅವ್ಯಕ್ತವಾದ ಪ್ರಕೃತಿಯೊಂದಿದೆ. ಅದರಿಂದ ದೇವರು ಸೃಷ್ಟಿಯನ್ನು ಮಾಡುವನು. ಪ್ರಪಂಚದಲ್ಲಿರುವ ದೋಷಗಳಿಗೆ ದೇವರು ಕಾರಣನಲ್ಲ, ಅದಕ್ಕೆ ಮನುಷ್ಯನೇ, ಅವನ ಕರ್ಮವೇ ಕಾರಣ. ಮಾನವನ ಭವಿಷ್ಯನಿರ್ಮಾಣಕ್ಕೆ ಮಾನವನಲ್ಲದೆ ಬೇರೆ ಯಾರೂ ಕಾರಣರಲ್ಲ. ಹಿಂದೆ ಹೇಳಿದ ಹಾಗೆ ಪ್ರಕೃತಿ ಮತ್ತು ಜೀವಿ – ಇವು ನಿತ್ಯವಾದರೂ ಭಗವಂತನಿಗೆ ಅಧೀನವಾದ ತತ್ತ್ವಗಳೇ ಆಗಿವೆ. ಭಗವಂತನ ಕೃಪೆಯಿಂದ ಜೀವಿ ಮುಕ್ತನಾಗುವನು. ಮುಕ್ತಿಯೆಂದರೆ, ಕೇವಲ ಆನಂದದಿಂದ ಮತ್ತು ಒಳಿತಿನಿಂದ ತುಂಬಿದ ಲೋಕವನ್ನು ಪಡೆದುಕೊಳ್ಳುವುದು. ಅಲ್ಲಿ ರೋಗರುಜಿನಗಳಿಲ್ಲ, ಮರಣಭಯವಿಲ್ಲ. ಅಲ್ಲಿ ಅನಂತಾನಂದವಿರುತ್ತದೆ. ಅನವರತ ದೇವರ ಸಾನ್ನಿಧ್ಯದಲ್ಲಿ ಇದ್ದುಕೊಂಡು, ಅವನ ಕೃಪಾನಂದವನ್ನು ಎಂದೆಂದಿಗೂ ಅನುಭವಿಸಬಹುದು. ಈ ರೀತಿ ಹೇಳುವ ದ್ವೈತ ಮತವೆಂಬುದು ಭಾರತದ ಸಾಮಾನ್ಯ ಜನರ ಧರ್ಮ.

ವಿಶಿಷ್ಟಾದ್ವೈತದ ಪ್ರಕಾರ, ಕಾರ್ಯವು ಕಾರಣದಿಂದ ಬೇರೆ ಅಲ್ಲ. 'ಕಾರ್ಯ'ವೆಂದರೆ ಬೇರೊಂದು ರೂಪದಲ್ಲಿರುವ 'ಕಾರಣ', ಅಷ್ಟೆ. ಹೀಗಾಗಿ ದೇವರೇ ಜಗತ್ತಾಗಿ ಕಾಣಿಸಿಕೊಳ್ಳುವನು. ಅವನೇ ಜಗತ್ತಿನ ಉಪಾದಾನ ಮತ್ತು ನಿಮಿತ್ತ ಕಾರಣ, ಎರಡೂ. ಹಾಗಾದರೆ ಜಗತ್ತು ಏಕೆ ಜಡವಾಗಿದೆ? ಇದಕ್ಕೆ ಪರಿಹಾರವಾಗಿ ವಿಶಿಷ್ಟಾದ್ವೈತಿಗಳು ದೇಹ–ದೇಹಿ, ಅಂಶ–ಅಂಶಿ ಸಿದ್ಧಾಂತವನ್ನು ಮುಂದಿಡುತ್ತಾರೆ. ದೇವರು ಆತ್ಮನಂತೆ, ಜೀವಿ ಮತ್ತು ಪ್ರಕೃತಿ ದೇವರ ದೇಹದಂತೆ. ಹಾಗೆಯೇ ದೇವರು ಅಂಶಿ (ಅಂಶಗಳನ್ನು ಒಳಗೊಂಡವನು). ಜೀವಿ ಮತ್ತು ಪ್ರಕೃತಿ ಅಂಶಗಳು (ಭಾಗಗಳು). ದ್ವೈತಿಗಳು ಮತ್ತು ವಿಶಿಷ್ಟಾದ್ವೈತಿಗಳಿಬ್ಬರೂ, ಆತ್ಮವು ಸ್ವಭಾವತಃ ಪರಿಶುದ್ಧವಾದರೂ ಕರ್ಮಸಂಸರ್ಗದಿಂದ ಅಶುದ್ಧವಾಗುವುದೆಂದು ನಂಬುತ್ತಾರೆ.

ಇನ್ನು ಅದ್ವೈತ ತತ್ತ್ವಕ್ಕೆ ಬರುವುದಾದರೆ, ಸ್ವಾಮೀಜಿ ಇದನ್ನು ಭಾರತೀಯ ತತ್ತ್ವದ ಮತ್ತು ಧರ್ಮದ ಚರಮಸೀಮೆಯೆಂದು ಕೊಂಡಾಡುತ್ತಾರೆ. ಅವರು ಹೀಗೆ ಹೇಳುತ್ತಾರೆ: "ಮತ್ತಾವ ದೇಶವೂ ಮಾನವಕೋಟಿಯ ಇಂಥ ಶ್ರೇಷ್ಠ ಭಾವನಾಕುಸುಮವನ್ನು ಸೃಷ್ಟಿಸಿಲ್ಲ. ಇಲ್ಲಿ ಮಾನವಯುಕ್ತಿಯು ತನ್ನ ಪರಾಕಾಷ್ಠೆಯನ್ನು ಮುಟ್ಟಿದೆ. ಇದು ಅಭೇದ್ಯವಾದ ರಹಸ್ಯವನ್ನು ಕೂಡ ಭೇದಿಸಿಕೊಂಡು ಹೋಗುವುದು." ದೇವರೊಬ್ಬನು ಇದ್ದರೆ, ಅವನು ಜಗತ್ತಿನ ಉಪಾದಾನ ಹಾಗೂ ನಿಮಿತ್ತ ಕಾರಣ – ಎರಡೂ ಆಗಿದ್ದಾನೆ ಎಂದು ಅದ್ವೈತಿಯು ಸಾರುತ್ತಾನೆ. ಹಾಗಾದರೆ ನಾವು ನೋಡುವ ಈ ಪ್ರಪಂಚ ಏನು? ಕೇವಲ ಮನಸ್ಸಿನ ಭ್ರಾಂತಿ, ಅಷ್ಟೇ. "ಇರುವುದೊಂದೇ; ಅದು ಅನಂತವಾಗಿದೆ; ಶಿವಮಯವಾಗಿದೆ; ಆ ಒಂದು ಅಸ್ತಿತ್ವದಲ್ಲಿಯೇ ನಾವು ಕನಸನ್ನು ಕಾಣುವೆವು. ಅದೇ ಆತ್ಮ. ಅದು ಎಲ್ಲಕ್ಕೂ ಅತೀತವಾಗಿದೆ. ಜ್ಞೇಯ, ಜ್ಞಾನಗಳಿಗೆ ಅತೀತವಾಗಿದೆ." ಆತ್ಮನಲ್ಲಿ ಲಿಂಗಭೇದವಿಲ್ಲ. ಅದು ಇರುವುದು ಒಂದೇ, ಎರಡಲ್ಲ. ಪ್ರತಿವಸ್ತುವೂ ಆತ್ಮವೇ. ನಾಮ, ರೂಪ, ದೇಹ – ಮುಂತಾದ ವ್ಯತ್ಯಾಸಗಳಿಗೆ ಜಡ ದ್ರವ್ಯ ಕಾರಣ. ಸ್ವಾಮೀಜಿ ಆತ್ಮದ ಏಕತ್ವವನ್ನು ಸುಂದರವಾಗಿ ಹೀಗೆ ಬಣ್ಣಿಸುವರು: "ನೀನೂ ನಾನೂ ಏಕವೇ. ದೇವರಾಗಲಿ, ಪ್ರಕೃತಿಯಾಗಲಿ, ವಿಶ್ವವಾಗಲಿ – ಇಲ್ಲವೇ ಇಲ್ಲ. ಅನಂತ ಒಂದೇ ಇರುವುದು." ಈ ಆತ್ಮವನ್ನು ತಿಳಿದುಕೊಳ್ಳುವುದಕ್ಕೆ ಆಗುವುದಿಲ್ಲ. ಸ್ವಾಮೀಜಿ ಕೇಳುತ್ತಾರೆ, "ನಿಮ್ಮ ಆತ್ಮವನ್ನು ನೀವು ಹೇಗೆ ತಿಳಿದುಕೊಳ್ಳಲು ಸಾಧ್ಯ? ನೀವು ನಿಮ್ಮನ್ನು ಪ್ರತಿಬಿಂಬಿಸಬಲ್ಲಿರಿ. ಈ ವಿಶ್ವವೆಲ್ಲ ಆ ಪರಮಾತ್ಮನ ಪ್ರತಿಬಿಂಬ." ಸ್ವಾಮೀಜಿಯವರ ಪ್ರಕಾರ ನಾವು ಏಕವನ್ನು ಅನೇಕವಾಗಿ ನೋಡುತ್ತಿರುವೆವು. ಈ ಚಿತ್ರಗಳನ್ನೆಲ್ಲ ಆತ್ಮದ ಮೇಲೆ ಚಿತ್ರಿಸುತ್ತಿರುವೆವು. ಹಾಗಾದರೆ, ಅದ್ವೈತವು ಬೋಧಿಸುವುದೇನು? ಈ ಪ್ರಶ್ನೆಗೆ ಸ್ವಾಮೀಜಿ ಬಹಳ ಧೈರ್ಯದ ಉತ್ತರ ನೀಡುತ್ತಾರೆ: "ಇದುವರೆಗೆ ಇದ್ದ ಮತ್ತು ಇರಬಲ್ಲ ಎಲ್ಲ ದೇವರನ್ನೂ ಪದಚ್ಯುತರನ್ನಾಗಿ ಮಾಡಿ, ಅವರ ಸ್ಥಾನದಲ್ಲಿ ಮಾನವನ ಆತ್ಮವನ್ನು ಪ್ರತಿಷ್ಠೆ ಮಾಡುವುದು...

ಆತ್ಮನಿಗಿಂತ ಮಹಿಮಾನ್ವಿತನಾದ ದೇವರು ಎಂದಿಗೂ ಇರಲಿಲ್ಲ. ಹಿಂದೆ ಇದ್ದ, ಈಗ ಇರುವ, ಮುಂದೆ ಇರಬಲ್ಲ, ಏಕಮಾತ್ರ ದೇವನು ಅವನೊಬ್ಬನೇ."

ಮನುಷ್ಯನು ದೇವರನ್ನು ಗ್ರಂಥಗಳಲ್ಲಿ, ಗುಡಿಗಳಲ್ಲಿ, ಸ್ವರ್ಗಗಳಲ್ಲಿ ಹುಡುಕುವನು. ತನ್ನಿಂದ ಬೇರೆಯಾಗಿರುವ, ಹೊರಗಿರುವ ದೇವರನ್ನು ಹುಡುಕಿ ಹುಡುಕಿ ನಿರಾಶನಾಗಿ, ತಾನು ಹೊರಟ ಸ್ಥಾನಕ್ಕೆ, ಅಂದರೆ ಆತ್ಮನೆಡೆಗೇ, ಬರುವನು. ಆಗ ತಾನು ಹುಡುಕುತ್ತಿದ್ದ ದೇವರು ತನ್ನ ಆತ್ಮವೆಂದೇ ಅವನಿಗೆ ಗೊತ್ತಾಗುವುದು. ಸ್ವಾಮೀಜಿ ಹೇಳುತ್ತಾರೆ, "ನಾನೇ ಅವನು. ನಾನಲ್ಲದೆ ಅನ್ಯರು ಯಾರೂ ದೇವರಾಗಿರಲಿಲ್ಲ." ಈ ಭಾವನೆಯೇ, ಎಲ್ಲ ವೈರುಧ್ಯಗಳನ್ನು ನಾಶಮಾಡುವುದೇ, ಜ್ಞಾನಾರ್ಜನೆಗೆ ಇರುವ ಏಕಮಾತ್ರ ಮಾರ್ಗ ಎಂದು ಅದ್ವೈತ ವೇದಾಂತಿ ಹೇಳುತ್ತಾನೆ. ಈ ಪ್ರವಚನದ ಕಡೆಯಲ್ಲಿ ಸ್ವಾಮೀಜಿ ಭಾರತೀಯ ದರ್ಶನಗಳನ್ನು ಹೀಗೆ ಸುಂದರವಾಗಿ ಸಮನ್ವಯಗೊಳಿಸುವರು: "ಬಾಹ್ಯದಿಂದ ವಿಶ್ವವ್ಯಾಪಿಯಾದ ಅಂತರ್ಯಾಮಿಯ ಕಲ್ಪನೆ ಬಂದಿತು; ಮುಂದೆ ಆತ್ಮನೇ ಪರಮಾತ್ಮನೆಂದು ಗೊತ್ತಾಯಿತು. ಕಡೆಗೆ ಅವನೇ ವಿಶ್ವವಾಗಿ ತೋರುತ್ತಿರುವನು ಎನ್ನುವುದರಲ್ಲಿ ಪರ್ಯವಸಾನವಾಯಿತು. ದ್ವೈತದಿಂದ ಪ್ರಾರಂಭವಾಗಿ, ವಿಶಿಷ್ಟಾದ್ವೈತದ ಮೂಲಕ ಸಾಗಿ, ಅದ್ವೈತದಲ್ಲಿ ಪರ್ಯವಸಾನವಾಗುವುದೇ ವೇದಗಳ ಕೊನೆಯ ಮಾತು."

**ಆತ್ಮ, ಅದರ ಬಂಧನ ಮತ್ತು ಮುಕ್ತಿ :** ಆತ್ಮವೊಂದೇ ಮಾನವ ದೇಹದಲ್ಲಿರುವ ಏಕಮಾತ್ರ ಅದ್ರವ್ಯ ವಸ್ತು. ಉಳಿದೆಲ್ಲವೂ ಜಡದ್ರವ್ಯಗಳೇ. ಹೀಗಾಗಿ ಆತ್ಮ ಸಂಯುಕ್ತವಸ್ತುವಲ್ಲ, ಅದು ಯಾವುದೇ ಕಾರ್ಯಕಾರಣ ನಿಯಮಕ್ಕೆ ಸಿಲುಕಿಲ್ಲ. ಆದಕಾರಣ ಅದು ಅಮೃತವಾಗಿರುವುದು. ಯಾವುದು ಅಮೃತಮಯವೋ, ಅದಕ್ಕೆ ಆದಿ, ಅಂತ್ಯ ಇರುವುದಿಲ್ಲ. ಅದ್ವೈತದ ಪ್ರಕಾರ ಆತ್ಮ ಎನ್ನುವುದು ಒಂದೇ ಆಗಿರಬೇಕು, ಅದು ಅನಂತ ಕೂಡ. ಹೀಗಾಗಿ ಎಲ್ಲರಲ್ಲೂ ಇರುವ ಆತ್ಮ ಸರ್ವವ್ಯಾಪಿ. ಆದರೆ ಮನಸ್ಸು ಮತ್ತು ದೇಹಗಳ ಮೂಲಕ ಇದು ಕೆಲಸ ಮಾಡುತ್ತಿರುವುದು ಕಂಡುಬರುತ್ತದೆ. ಹೀಗಾಗಿ ಮನಸ್ಸು ಮತ್ತು ದೇಹಗಳೇ ನಾವು ಎಂಬ ಸಂಸ್ಕಾರವನ್ನು ಬೆಳೆಸಿಕೊಂಡಿರುವೆವು. ಎಲ್ಲಿಯವರೆಗೆ ಇಂತಹ ಸಂಸ್ಕಾರವಿರುವುದೋ, ಅಲ್ಲಿಯವರೆಗೆ ಆತ್ಮವು ಮನಸ್ಸೆಂಬ ಸುಂಟರಗಾಳಿಯಿಂದ ಆವೃತವಾಗಿರುವುದು. ಇದನ್ನೇ 'ಬಂಧನ' ಎನ್ನುವುದು. ಸುಂಟರಗಾಳಿ ನಿಂತಾಗ ಆತ್ಮಕ್ಕೆ ತಾನು ಸರ್ವವ್ಯಾಪಿ ಎಂದು ಗೊತ್ತಾಗುವುದು. ಆಗ ಅದು ತನಗೆ ಇಚ್ಛೆ ಬಂದ ಕಡೆಗೆ ಹೋಗುವುದು. ಇದೇ 'ಸ್ವಾತಂತ್ರ್ಯ.' ಈ ಸ್ವಾತಂತ್ರ್ಯದ ಗುರಿಯೆಡೆಗೇ ನಾವೆಲ್ಲ ಹೋಗುತ್ತಿದ್ದೇವೆ. ನಾವು ಒಂದು ಅನಂತವಾದ ಸರಪಳಿಯಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ. ಅದರ ಪ್ರತಿಯೊಂದು ಕೊಂಡಿಗೂ ಜನನ, ಮರಣ ಎಂಬ ಎರಡು ತುದಿಗಳಿರುತ್ತವೆ. ನಾವು ಈ ಪ್ರಪಂಚಕ್ಕೆ ನಮ್ಮ ಕರ್ಮಫಲಗಳ ಮೊತ್ತದೊಡನೆ ಬರುತ್ತೇವೆ. ಇದು ಹೇಗೆಂದರೆ, ರೇಶ್ಮೆಯ ಹುಳು ತನ್ನ ಬಾಯಿಂದ ನೂಲನ್ನು ಸ್ರವಿಸಿ, ಗೂಡುಕಟ್ಟಿ, ಅದರಲ್ಲಿ ತಾನೇ ಸಿಕ್ಕಿಹಾಕಿಕೊಂಡ ಹಾಗೆ. ಇದೇ ರೀತಿ ನಾವು ಕರ್ಮದ ಬಲೆಯನ್ನು ನಮ್ಮ ಸುತ್ತಲೂ ಬೀಸಿಕೊಂಡಿರುವೆವು. ಸ್ವಾಮೀಜಿ ಹೇಳುತ್ತಾರೆ, "ಆತ್ಮವು ಭ್ರಾಂತಿಯಿಂದ, 'ನಾನು ಸಂಚರಿಸುತ್ತಿರುವೆನು, ಪ್ರಕೃತಿಯಲ್ಲ' ಎಂದು ಭಾವಿಸುವುದೇ ಬಂಧನ. 'ನಾನು ಎಂದೂ ಚಲಿಸುವುದಿಲ್ಲ, ನಾನು ಸರ್ವವ್ಯಾಪಿ' ಎಂದು ಭಾವಿಸಿದರೆ ಅದೇ ಮುಕ್ತಿ." ಬಂಧನದಲ್ಲಿರುವ ಆತ್ಮವನ್ನೇ ಜೀವ ಎಂದು ಕರೆಯುವರು. ಈ ವಿಶ್ವವೆಲ್ಲ ಬ್ರಹ್ಮನಲ್ಲಿತ್ತು. ಇದೆಲ್ಲ ಅವನಿಂದ ಹೊರಹೊಮ್ಮಿದಂತೆ ಇದೆ. ಪುನಃ ಎಲ್ಲಿಂದ ಬಂದಿತೋ, ಅಲ್ಲಿಗೇ ಹಿಂತಿರುಗುವುದಕ್ಕೆ ಯತ್ನಿಸುತ್ತಿದೆ. ಮನುಷ್ಯನು ಬ್ರಹ್ಮನಿಗೆ ಅತಿ ಸಮೀಪನಾದವನು. ನಮಗೆ ಇದು ತಿಳಿದಿರಲಿ, ಇಲ್ಲದಿರಲಿ, ನಾವು ಬ್ರಹ್ಮನೆಡೆಗೆ ಹೋಗುವುದಕ್ಕೇ ಈ ಎಲ್ಲ ಹೋರಾಟವೂ ಇರುವುದು. ಹಿಂದೆ ಸಮತ್ವ ಇತ್ತು. ಅದು ಈಗ ನಾಶವಾಗಿ ಹೋಗಿದೆ. ಎಲ್ಲ ಭಾಗಗಳು, ಕಣಗಳು ತಾವು ಕಳೆದುಕೊಂಡ ಸಮತ್ವವನ್ನು ಪುನಃ ಪಡೆಯುವುದಕ್ಕೆ ಯತ್ನಿಸುತ್ತಿವೆ. ಈ ಹೋರಾಟ ಮಾತ್ರ ನಮ್ಮನ್ನು ಗುರಿಯ ಕಡೆಗೆ ಒಯ್ಯುವುದು. ನಾವು ಈಗ ಈ ಜೀವನದಲ್ಲಿ ಏತಕ್ಕಾಗಿ ಹೋರಾಡುವೆವೋ ನಮಗೆ ಗೊತ್ತಿಲ್ಲ. ಆದರೆ ನಾವು ಹೋರಾಡಲೇಬೇಕು. ಪ್ರಜ್ಞಾಪೂರ್ವಕವಾಗಿ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳಲು ಹೋರಾಡುವುದನ್ನು ನಮಗೆ ವೇದಾಂತ ತಿಳಿಸಿಕೊಡುತ್ತದೆ. ವೇದಾಂತದ ಸಾರಸರ್ವಸ್ವವೇ ಇದು: "ಪ್ರಪಂಚವನ್ನು ತ್ಯಜಿಸುವುದು, ಅಸತ್ಯವನ್ನು ತ್ಯಜಿಸಿ ಸತ್ಯವನ್ನು ಸ್ವೀಕರಿಸುವುದು." ಆಸೆ ಆಕಾಂಕ್ಷೆಗಳಿರುವುದೇ ಅಪೂರ್ಣತೆಯ ಲಕ್ಷಣ. ದೇವರಿಗೆ ಮತ್ತು ನಿತ್ಯಮುಕ್ತರಿಗೆ ಯಾವ ಆಸೆಯೂ ಇಲ್ಲ. ಆದಕಾರಣವೇ ಮಹಾಪುರುಷರೆಲ್ಲ ಹೀಗೆ ಹೇಳುತ್ತಾರೆ: "ಏನನ್ನೂ ಆಶಿಸಬೇಡಿ. ಆಸೆಯನ್ನೆಲ್ಲ ತ್ಯಜಿಸಿ, ನಿತ್ಯತೃಪ್ತರಾಗಿ" ಎಂದು.

**ಮಾನವನ ನೈಜ ಮತ್ತು ತೋರಿಕೆಯ ಸ್ಥಿತಿ:** ವೇದಾಂತ ದಾರ್ಶನಿಕರ ಮುಖ್ಯ ಧ್ಯೇಯವೆಂದರೆ ಏಕತೆಯ ಅನ್ವೇಷಣೆ. ಯಾವುದನ್ನು ತಿಳಿದರೆ ಇಡೀ ವಿಶ್ವವನ್ನು ತಿಳಿಯಬಲ್ಲೆವೋ ಅದರ ಹುಡುಕಾಟ. ವಿಶ್ವವನ್ನೆಲ್ಲಾ 'ದ್ರವ್ಯ' ಮತ್ತು 'ಶಕ್ತಿ' ಎಂಬ ಎರಡು ರೂಪಗಳಿಗೆ ತರಬಹುದು. ಇದನ್ನೇ ಹಿಂದೂ ದಾರ್ಶನಿಕರು 'ಪ್ರಾಣ' ಮತ್ತು 'ಆಕಾಶ' ಎಂದು ಕರೆದರು. ಈ ಎರಡನ್ನೂ 'ಮನಸ್ಸು' ಎಂಬ ಇನ್ನೂ ಉನ್ನತ ಅಂಶದಲ್ಲಿ ಐಕ್ಯಗೊಳಿಸಬಹುದು. ಇದನ್ನೇ 'ಮಹತ್ತು' ಎನ್ನುವರು. ಮಹತ್ತೇ ಆಕಾಶ ಮತ್ತು ಪ್ರಾಣವೆಂಬುದಾಗಿ ವಿಭಾಗಗೊಂಡಿರುವುದು.

ಇನ್ನು ಮನಶ್ಶಾಸ್ತ್ರಕ್ಕೆ ಬರೋಣ. ಇಂದ್ರಿಯಗಳು, ಬಾಹ್ಯ ಸಂವೇದನೆಗಳನ್ನು ಮಿದುಳಿಗೆ ಒಯ್ಯುತ್ತವೆ. ಮಿದುಳು ಅವನ್ನು ಬುದ್ಧಿಗೆ ಒಪ್ಪಿಸುತ್ತದೆ. ಬುದ್ಧಿಯು ಇದನ್ನು ಆಗಲೇ ನೋಡಿದ ಅನುಭವದೊಂದಿಗೆ ಜೋಡಿಸಿ, ಪ್ರತಿಕ್ರಿಯೆಯನ್ನು